ತಾರೀಹಳ್ಳಿ–ಕಾನಸೂರ ಗ್ರಾಮ ಪಂಚಾಯತ ತಾ.– ಸಿದ್ದಾಪುರ (ಉ.ಕ)

Email :- gpkansur1@gmail.com Phone: (08389) 262524

ಕ್ರಸಂ:ಗ್ರಾ.ಪಂಕಾ/ವಿ.ಗ್ರಿಮ/2018–19/33 ದಿನಾಂಕ : 21–01–2019

ರಿಗೆ,

ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,
ಬೃಹತ್ ಕಾಮಗಾರಿ ಉಪ ವಿಭಾಗ, ಕ.ವಿ.ಪ್ರ.ನಿ.ನಿ ಶಿರಸಿ (ಉ.ಕ)

ಮಾನ್ಯರೇ,

ವಿಷಯ: ಕಾನಸೂರು ಗ್ರಾಮ ಪಂಚಾಯತ ವ್ಯಾಪ್ತಿಯ ಕಾನಗೋಡ–ಕಾನಸೂರು ಗ್ರಾಮದ ಸರ್ವೆ ನಂ 54ಎ ನಲ್ಲಿ ಹೊಸದಾಗಿ ಉದ್ದೇಶಿತ ವಿದ್ಯುತ್ ಗ್ರಿಡ್ ನಿರ್ಮಾಣಕ್ಕಾಗಿ ಅರಣ್ಯ ಭೂಮಿ ಮಂಜುರಾತಿ ಕುರಿತು.

ಕಾನಸೂರು ಗ್ರಾಮ ಪಂಚಾಯತ ವ್ಯಾಪ್ತಿಯ ಕಾನಗೋಡ–ಕಾನಸೂರು ಗ್ರಾಮದ ಸರ್ವೆ ನಂ 54ಎ ನಲ್ಲಿ 1.33 ಹೆಕ್ಟೇರ್ ಅರಣ್ಯ ಭೂಮಿಯನ್ನು ಹೊಸದಾಗಿ ಉದ್ದೇಶಿತ ವಿದ್ಯುತ್ ಗ್ರಿಡ್ ನಿರ್ಮಾಣಕ್ಕಾಗಿ ಮಂಜುರಾತಿಗಾಗಿ ಬೇಡಿಕೆ ಸಲ್ಲಿಸಲಾಗಿತ್ತು. ಆದರೆ ಈ ಬಗ್ಗೆ ಅರಣ್ಯ ಭವನ ಬೆಂಗಳೂರಿನಿಂದ ಕೆಲವು ನ್ಯೂನ್ಯತೆಗಳ ಬಗ್ಗೆ ಸ್ಪಷ್ಟೀಕರಣ ನೀಡಲು ತಿಳಿಸಿದ್ದಾಗಿ ತಮ್ಮ ಕಛೇರಿಯಿಂದ ನಮಗೆ ತಿಳಿದು ಬಂದಿದೆ. ಈ ಕೆಳಗಿನ ಅಂಶಗಳನ್ನು ಪರಿಗಣಿಸಿ ಸದರಿ ಅರಣ್ಯ ಭೂಮಿಯಲ್ಲಿಯೇ ಉದ್ದೇಶಿತ ಗ್ರಿಡ್ ನಿರ್ಮಾಣವನ್ನು ಕೈಗೊಳ್ಳಲು ಅರಣ್ಯ ಭೂಮಿಯನ್ನು ಮಂಜೂರಿಸುವುದು ಸೂಕ್ತವೆಂದು ನಮ್ಮ ಪಂಚಾಯತದ ಅಭಿಪ್ರಾಯವೆಂದು ತಿಳಿಸಲಾಗಿದೆ.

1. ಕಾನಸೂರಿನ ಸುತ್ತ–ಮುತ್ತ ಕಂದಾಯ ಜಮೀನನ್ನು ಕ್ರಯಕ್ಕೆ ಮಾರಾಟ ಮಾಡುವ ಖಾಸಗಿ ಜಮೀನಿನವರಾಗಲಿ ಅಥವಾ ಸರಕಾರಿ ಪಡಾ ಜಮೀನಾಗಲಿ ಯಾವುದೂ ಲಭ್ಯವಿರುವುದಿಲ್ಲ.
2. ಸರ್ವೆ ನಂಬರ್ 54ಎ ರಲ್ಲಿರುವ ಅರಣ್ಯ ಕ್ಷೇತ್ರದಲ್ಲಿ ಮರಗಳ ಸಂಖ್ಯೆ ವಿರಳವಾಗಿದ್ದು, ಕೇವಲ ಅಕೇಶಿಯಾ ಮರಗಳು ಮಾತ್ರ ಇರುತ್ತವೆ ಹಾಗೂ ಈ ಸ್ಥಳವು ಪಿ.ಡಬ್ಲ್ಯೂಡಿ. ರಸ್ತೆಗೆ ಹೊಂದಿಕೊಂಡಿರುವುದರಿಂದ ಸಾಗಾಟ ವ್ಯವಸ್ಥೆಗೆ ಅನುಕೂಲಕರವಾಗಿದೆ. ಸದರಿ ಅರಣ್ಯ ಕ್ಷೇತ್ರವು ವಿದ್ಯುತ್ ಮೇನ್ ಲೈನ್ ಪಕ್ಕದಲ್ಲಿಯೇ ಇರುವುದರಿಂದ ವಿದ್ಯುತ್ ಮಾರ್ಗಕ್ಕಾಗಿ ಅತೀ ಕಡಿಮೆ ಪ್ರಮಾಣದ ಅರಣ್ಯ ನಾಶವಾಗುವುದು.
3. ಕಾನಸೂರು ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ವಾಸಿಸುವ 1200 ಕುಟುಂಬಗಳು, 100ಕ್ಕಿಂತ ಹೆಚ್ಚು ವಾಣಿಜ್ಯ ಮಳಿಗೆಗಳು/ಅಂಗಡಿಗಳು, ಎರಡು ಅಕ್ಕಿ ಗಿರಣಿಗಳು, ಹಲವಾರು ವಸ್ತು ತಯಾರಿಕಾ ಘಟಕಗಳು ಇರುತ್ತಿದ್ದು, ಸಾಕಷ್ಟು ವಿದ್ಯುತ್ ಬೇಡಿಕೆ ಪ್ರದೇಶವಾಗಿದೆ. ಹಾಲಿ ವಿದ್ಯುತ್ ಸಂಪರ್ಕವು 25 ಕಿ.ಮೀ ದೂರದ ಸಿದ್ದಾಪುರ ಪಟ್ಟಣದಲ್ಲಿರುವ 110 ಕೆವಿ ಗ್ರಿಡ್ ನಿಂದ ಸರಬರಾಜಾಗುತ್ತಿದ್ದು, ವಿದ್ಯುತ್ ಲೈನ್‌ಗಳು ಹೆಚ್ಚಾಗಿ ಅರಣ್ಯ ಪ್ರದೇಶದಲ್ಲಿ ಹಾದು ಹೋಗಿರುವುದರಿಂದ ಹೆಚ್ಚಿನ ವಿದ್ಯುತ್ ವ್ಯತ್ಯಯವಾಗುತ್ತಿದೆ. ಸಿದ್ದಾಪುರ ವಿದ್ಯುತ್ ಗ್ರಿಡ್‌ನಿಂದ 25 ಕಿ.ಮೀ ದೂರವಿರುವುದರಿಂದ ಸರಿಯಾದ ವಿದ್ಯುತ್ ಒತ್ತಡ ಇಲ್ಲದಂತಾಗಿರುತ್ತದೆ. ಮಳೆಗಾಲದಲ್ಲಿ ಕಾನಸೂರು ವ್ಯಾಪ್ತಿಯಲ್ಲಿ ಪದೇ ಪದೇ ವಿದ್ಯುತ್ ಸಂಪರ್ಕ ಕಡಿತವಾಗುತ್ತಿದ್ದು, ಹೊಸ ಗ್ರಿಡ್ ಗಾಗಿ ಬಹು ದಿನಗಳ ಬೇಡಿಕೆಯಾಗಿರುತ್ತದೆ.
4. ಶಿರಸಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜಿಗಾಗಿ ಇರುವ ಮಾರಿಗದ್ದೆ ಜ್ಯಾಕ್‌ವೆಲ್ ಪ್ರೊಜೆಕ್ಟ್‌ಗೆ 15 ಕಿ.ಮೀ ದೂರದಲ್ಲಿರುವ ಶಿರಸಿ 110ಕೆವಿ ಗ್ರಿಡ್‌ನಿಂದ ವಿದ್ಯುತ್ ಸರಬರಾದು ಆಗುತ್ತಿದೆ. ಕಾನಸೂರಿನ ಹೊಸದಾಗಿ ಉದ್ದೇಶಿತ ವಿದ್ಯುತ್ ಗ್ರಿಡ್‌ನಿಂದ ಮಾರಿಗದ್ದೆ ಜ್ಯಾಕ್‌ವೆಲ್ ಪ್ರೊಜೆಕ್ಟ್ ಕೇವಲ 3 ಕಿ.ಮೀ ದೂರದಲ್ಲಿರುವುದರಿಂದ ವಿದ್ಯುತ್ ಸರಬರಾದು ನಿರಂತರವಾಗಿ ಸಿಗಲು ಅನುಕೂಲವಾಗಲಿದೆ ಅಲ್ಲದೇ ಕಾನಸೂರಿನ ಅಕ್ಕ ಪಕ್ಕದಲ್ಲಿರುವ 6 ಗ್ರಾಮ ಪಂಚಾಯತ ವ್ಯಾಪ್ತಿಗೆ ನಿರಂತರವಾಗಿ ವಿದ್ಯುತ್ ವ್ಯವಸ್ಥೆ ಕಲ್ಪಿಸಲು ಅನುಕೂಲವಾಗಲಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಪಂಚಾಯತ ಅಭಿವೃದ್ಧಿ ಅಧಿಕಾರಿ
ಗ್ರಾಮ ಪಂಚಾಯತ, ತಾರೀಹಳ್ಳಿ-ಕಾನಸೂರ
ತಾ: ಸಿದ್ದಾಪುರ (ಉ.ಕ.)

ಪ್ರತಿಗಳು: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
ಹೆಸ್ಕಾಂ ಸಿದ್ದಾಪುರ (ಉ.ಕ)

FTS - 1128659, 8670, 8671

Scanned by CamScanner